ಥಂಡಿಗೊ ಪ್ರತಿಷ್ಠಿತರ ಬಿಗುಮಾನಕ್ಕೊ ಮೈಹಿಡಿ ಮಾಡಿಕೊಂಡು, ಕೆಮ್ಮಿದರೆ ಏನಾಗುತ್ತದೆಯೊ ಎಂದಳುಕಿ ಕೂರುವುದು ನನಗಾಗದು. ವಿಮಾನಗಳಲ್ಲೊ, ಅನ್ಯಗ್ರಹದ ಜೀವಿಗಳು ಸಂಪರ್ಕ ಭಾಷೆಯಿಲ್ಲದೆ ಕೂತಂತಿರುತ್ತದೆ. ಒಮ್ಮೆ ಬಗಲಲ್ಲಿದ್ದ ಯುವತಿ ಇಂಗ್ಲಿಷ್ ಹೊತ್ತಿಗೆಯೊಳಗೆ ತಲೆ ಹುದುಗಿಸಿದವಳು, ದೆಹಲಿ ಬಂದಾಗಲೇ ಎತ್ತಿದ್ದು. ಪಕ್ಕದಲ್ಲೊಂದು ನರಪ್ರಾಣಿಯಿದೆ ಎಂಬುದನ್ನೂ ಲೆಕ್ಕಕ್ಕಿಡದ ಆಕೆ, ಬಾತ್‌ರೂಮಿಗೆ ಹೋಗುವಾಗ ಮಾತ್ರ 'ಎಕ್ಸ್‌ಕ್ಯೂಸ್ ಮಿ' ಎಂದು ಘಟ್ಟಿಸಿ ಜಾಗಬಿಡಿಸಿಕೊಂಡಳು. ಕ್ಷಮಿಸಲು ಅವಕಾಶವಿಲ್ಲದ ಇಂಥ ಕ್ಷಮಾಯಾಚನೆಗಳು ಬಸ್ಸುಗಳಲ್ಲಿ ಇರುವುದಿಲ್ಲ. 'ಯಪ್ಪಾ ಕಾಲ್ತುಳಿದೆಯಲ್ಲೊ', 'ಮೈಮೇಲೆ ಬೀಳ್ತೀರಲ್ಲರಿ' ಎಂದರೆ, ಹಲ್ಲುಕಿರಿದು 'ರಶ್ಶದ. ಸುಧಾರಸಕೋರಿ' ಎಂದು ಉಚಿತಬೋಧೆ ಸಿಗುತ್ತದೆ. ನಾನು ನೆರೆಸೀಟಿನ ಗಗನಕನ್ಯೆ ಹುಟ್ಟಿಸಿದ ಕೀಳರಿಮೆಗೆ ಮುಯ್ಯಿ ತೀರಿಸಲು 'ಮಾಡಿದ್ದುಣ್ಣೋ ಮಹಾರಾಯ' ಕಾದಂಬರಿ ತೆರೆದು ಓದಲಾರಂಭಿಸಿದೆ. ಅವಳೊಮ್ಮೆ ಅದರತ್ತ ಕಣ್ಣುಹಾಯಿಸಿ ಮತ್ತಷ್ಟು ತಿರಸ್ಕಾರ ಹೆಚ್ಚಿಸಿಕೊಂಡಳು. ವಾಹನ ಮುಗಿಲಕಡೆ ಹಾರಿದಂತೆಲ್ಲ ನೆಲಭಾಷೆಗಳು ಕಡಿಮೆಗೊಂಡು ದೇವಭಾಷೆಗಳು ಆವಾಹನೆಯಾಗುವುದೇಕೊ? ಅದರಲ್ಲೂ ಫೋನಿನಲ್ಲಿ ಅಂಗ್ರೇಜಿಯಲ್ಲಿ ಸ್ವರವೇರಿಸಿ ಮಾತಾಡುತ್ತ ತಮ್ಮ ಅಂತಸ್ತು ಪ್ರಕಟಿಸುವುದನ್ನು ಕೇಳಲು ಎರಡು ಕಿವಿ ಸಾಲವು.

ಇವರಿಗೆಲ್ಲ ಹೋಲಿಸಿದರೆ, ಲೋಕಲ್ ಟ್ರೈನು–ಬಸ್ಸಿನ ಜನ ಖರೇಖರೇ ತಾಯ್ನುಡಿ ಅಭಿಮಾನಿಗಳು; ಭಾವನೆ ಅಡಗಿಸುವುದನ್ನೇ ಅರಿಯದ ಪ್ರಾಮಾಣಿಕರು. ಬಸ್ಸಿಗೂ ಬೀದಿಗೂ ವ್ಯತ್ಯಾಸವಿಲ್ಲದಂತೆ ಮಾತಾಡುವ ಅವರ ಮುಗ್ಧತೆ ಕೆಲವೊಮ್ಮೆ ದುಬಾರಿ. ಹರಿಹರಕ್ಕೆ ಇಂಟರ್‌ಸಿಟಿ ಹಿಡಿಯಲೆಂದು ಮೊದಲ ಬಸ್ಸಿಗೆ ಹೊರಟಿದ್ದೆ. ಬೆಳಗಿನ ಜಾವಕ್ಕೇ ಎದ್ದು ಸುಡುನೀರಲ್ಲಿ ಮಿಂದಿದ್ದ ಪ್ರಯಾಣಿಕರು ಎಂಜಿನಿನ ಶ್ರುತಿಗೆ ತೂಕಡಿಸುತಿದ್ದರು. ಹಿಂದಿನ ಸೀಟಿನಲ್ಲಿ ಬೀಜಗೊಬ್ಬರ ತರಲು ದಾವಣಗೆರೆಗೆ ಹೊರಟ್ಟಿದ್ದ ರೈತನು ಮೊಬೈಲಿನಲ್ಲಿ ಸಣ್ಣಗೆ ಮಾತಾಡುತ್ತಿದ್ದನು. 'ಹಲಾ! ಹಲಾ! ಹುಲಗಪ್ಪನಾ, ಬಸ್ಸಿಗೆ ಬಂದು ರೊಕ್ಕ ಮುಟ್ಟಸ್ತೀನಿ ಅಂದಿದ್ದೆ. ನಾಯಿ ಕಾದಂಗ ಕಾದನಲ್ಲೊ ಸ್ಟ್ಯಾಂಡ್‌ನಾಗ. ಯಾಕ್ಲೇ ಬರಲಿಲ್ಲ?' ಎಂದು ಉಲಿದ. ಪ್ರಶ್ನೆ ಸಿವಿಲ್‌ಭಾಷೆಯಲ್ಲಿತ್ತು. ಅತ್ತಿಂದ ಏನುತ್ತರ ಬಂತೊ ಏನೊ, ಇದ್ದಕ್ಕಿದ್ದಂತೆ ದನಿಯೇರಿತು. 'ಯಾಕಿಂಥ ಹಡಬಿಟ್ಟಿ ಕೆಲಸ ಮಾಡ್ತೀರಲೆ? ಎಷ್ಟು ದಿನದಿಂದ ಕಾದಿದ್ಲೇ ಇಂಥ ದಗಾ ಮಾಡಕ? ಆ್ಞಂ, ಏನಂದೆ? ಮುಂದಿನ ವಾರ ಕೊಡ್ತೀಯಾ? ಈಗ್ಲೇಳೊ, ಊಟಕ್ಕಿಲ್ಲದ ಉಪ್ಪಿನಕಾಯಿ... ರೊಕ್ಕಿಲ್ಲದೆ ಬಜಾರಿಗೆ ಹೋಗಿ ನಾನೇನು ಹುಲ್ಲು ಕೀಳಲೇ? ನಿಮ್ಮಂಥೋರಿಗೆ ಉದರಿ ಕೊಡ್ತೀವಲ್ಲ, ಕಾಲ್ಮರಿ ತಗಂಡ ಹೊಡ್ಕೊಬೇಕು...' ಹಿರೋಶಿಮಾ ಮೇಲೆ ಬಾಂಬಿನ ಮಳೆ. ಅವನ ಕಂಠೀರವಕ್ಕೊ ಅದರೊಳಗಿನ ಉಪ್ಪುಹುಳಿಗೊ ಬೆದರಿದ ಜಿಂಕೆಯಂತೆ ನಿದ್ರಾಭಂಗಿತರಾದ ಪಯಣಿಗರು, ಶಬ್ದೋತ್ಪತ್ತಿ ಆಗುತ್ತಿದ್ದ ದಿಕ್ಕಿನತ್ತ ಕುತ್ತಿಗೆ ಹೊರಳಿಸಿದರು. ಕಂಡಕ್ಟರ್ ಎದ್ದುಹೋಗಿ 'ಮಾಮಾ, ಹೆಣಮಕ್ಕಳದಾರ. ಇವತ್ತಿಗೆ ಇಷ್ಟುಸಾಕು. ಊರಿಗೆ ಹೋದಮ್ಯಾಲೆ ಖಾಲಿ ಮಾಡೀಯಂತೆ' ಎಂದು ಮಂತ್ರಪ್ರವಾಹಕ್ಕೆ ತಡೆಹಾಕಬೇಕಾಯಿತು. ನೇಗಿಲಯೋಗಿ ಪೆಚ್ಚಾಗಿ 'ಹಂಗೇ ಆಗಲೇಳ್ರಿ' ಎಂದು ಗಪ್ಪಾದನು. ಅವನು ಧನ್‌ಧನ್ ಎಸೆದಿದ್ದ ಬಂಡೆಗಳು ಮಾನಸ ಸರೋವರವನ್ನು ಕದಡಿದ್ದರಿಂದ ಯಾರಿಗೂ ಹೋದನಿದ್ದೆ ಮರಳಲಿಲ್ಲ.

ಪಯಣದಲ್ಲಿ ಅಪರಿಚಿತರ ನಡುವೆ ಕುದುರುವ ಸಂಬಂಧಗಳು ಸೋಜಿಗ ಬರಿಸುತ್ತವೆ. ಈ ಸಂಬಂಧ ಸ್ಥಾಪನೆಯ ಉದ್ಘಾಟನೆಯಾಗುವುದು ಮಾತ್ರ ಭೀಷಣ ಕಾಳಗದಿಂದ. ಈ `ಸೀಟಿಗಾಗಿ ಹೋರಾಟ' ಪ್ರಸಂಗಗಳು ಜಾತ್ರಾ ನಾಟಕದ ಸೀನಂತಿರುತ್ತವೆ. ಬಂಡಿಗೆ ಹೊಸಬರು ಹತ್ತುತ್ತಿದ್ದಂತೆ